ಈಗ ಮಾತ್ರ ಸಾಲಿಹಾ ಸ್ಫೋಟಗೊಂಡಳು: "ನಾವು ಬದುಕಿರುವುದೇ ನಮ್ಮ ಇಬ್ಬರು ಹೆಣ್ಣು ಮಕ್ಕಳ ಸಲುವಾಗಿ. ನಾವು ಭಿಕಾರಿಗಳಲ್ಲ, ಮನೆಯಲ್ಲಿ ನಿಖಾ ಮಾಡಿಕೊಡೋದಿಕ್ಕೆ. ನಮ್ಮ ಮಗಳ ಹಕ್ಕು ಏನೆಲ್ಲ ಕೊಡಬೇಕೋ ಅದನ್ನು ಕೊಟ್ಟು ಶಾದಿಮಹಲ್‌ನಲ್ಲಿ ದಿವಿನಾಗಿಯೇ ಮದುವೆ ಮಾಡ್‌ತೀವಿ. ಅದೆಲ್ಲ ನೀವು ಹೇಳುವ ಅಗತ್ಯವಿಲ್ಲ" ಎಂದು ಹೇಳುವಷ್ಟರಲ್ಲಿ ಅವಳ ಧ್ವನಿ ಏರತೊಡಗಿತ್ತು. "ಈಗ ನೀವೇನೋ ಗೌರವಾನ್ವಿತವಾಗಿ ಮನೆಗೆ ಬಂದು ಹೆಣ್ಣು ಕೇಳಿದೀರಿ. ಅದೇನೂ ನನಗೆ ಬೇಜಾರು ಇಲ್ಲ. ಆದರೆ ನಿಮ್ಮ ಮನೆಗೆ ಕೊಡುವುದು ಬಿಡುವುದು ನಮ್ಮ ಇಷ್ಟ. ಹಾಗೆ ಹೇಳಬೇಕೆಂದರೆ ನಾನು ಯಾರಿಗೂ ಕೇಳುವ ಅಗತ್ಯವಿಲ್ಲ. ನಿಮ್ಮ ಮನೆಗೆ, ನಿಮ್ಮ ಮಗನಿಗೆ ನಾವು ಹೆಣ್ಣು ಕೊಡುವುದಿಲ್ಲ." ಖಡಾ ಖಂಡಿತವಾಗಿ ಹೇಳಿದ ಅವಳು ಎದ್ದು ನಿಂತಳು.

ಆಮೀನಾಬೀ ವಿಚಲಿತಳಾದರೂ ಕಂಗೆಡಲಿಲ್ಲ. ಅವಳು ಹೇಳಿದಳು, "ಸಾಲಿಹಾ ನೀವು ನನಗಿಂತ ವಯಸಿನಲ್ಲಿ ಚಿಕ್ಕವರು. ನಾನು ನಿಮಗಿಂತ ಜಾಸ್ತಿ ಲೋಕ ಕಂಡಿದೀನಿ. ನಿಮ್ಮ ಮಗಳನ್ನ ನನ್ನ ಮಡಿಲಿಗೆ ಹಾಕಿ ನಾನು ಸೆರಗೊಡ್ಡಿ ಬೇಡುತ್ತಿದ್ದೇನೆ" ಎಂದು ಎರಡೂ ಕೈಗಳನ್ನು ಮುಂದೆ ಮಾಡಿ ಅಂಗಲಾಚಿದಳು. ಹಾಗೆ ಬೇಡಿದಾಗ ಅವಳ ಕಣ್ಣಲ್ಲೀ ನೀರು ಜಿನುಗುತ್ತಿತ್ತು. ಅವಳು ತನ್ನ ಮಗನ ಸಲುವಾಗಿ ತನ್ನ ಆತ್ಮಸಮ್ಮಾನವನ್ನು ಒರೆಗೆ ಇಟ್ಟಿದ್ದಳು. ಅದು ಅಂತರಂಗದಲ್ಲಿ ಪ್ರವಹಿಸುತ್ತ ಸಾಲಿಹಾಗೆ ಕೂಡ ತಲುಪಿತು. 'ಈ ಮೆಹೆಕ್ ಏನೋ ಅನರ್ಥ ಮಾಡಿಕೊಂಡಿದಾಳೆ' ಎಂಬ ಅವಳ ಅಂತರಂಗದ ಧ್ವನಿ ಮೂರ್ತಾಕಾರವಾಗಿ ಅವಳ ಎದುರಿಗೆ ನಿಂತಿತ್ತು. ಕಣ್ಣೀರ ಕೋಡಿಯನ್ನು ಸೆರಗಿನಿಂದಲೇ ಒರೆಸಿಕೊಳ್ಳುತ್ತಾ ಆಮಿನಾಬೀ ಮತ್ತೆ ಮತ್ತೆ ಬೇಡಿಕೊಂಡಳು. ಸಾಲಿಹಾ ಒಂದಿನಿತೂ ತನ್ನ ಸ್ಥಳದಿಂದ ಮತ್ತು ತನ್ನ ನಿಲುವಿನಿಂದ ಅಲುಗಾಡಲಿಲ್ಲ. ಅವಳು ಆ ಕ್ಷಣದಲ್ಲೇ ನಿರ್ಧರಿಸಿ ಆಗಿತ್ತು. ತನ್ನ ಅಪ್ರತಿಮ ಸುಂದರಿ ಮಗಳನ್ನು ಹೇಗೆ ಮದುವೆ ಮಾಡಿ ಯಾರಿಗೆ ಕೊಡಬೇಕು ಎನ್ನುವುದನ್ನು ಅವಳು ಈಗಾಗಲೇ ನಿಶ್ಚಯಿಸಿದ್ದಳು. ಮತ್ತು ಮೊಬೈಲ್ ಅಂಗಡಿಯ ಹುಡುಗನನ್ನಂತೂ ಅವಳು ಅಳಿಯನನ್ನಾಗಿ ನೋಡಲೂ ಸಿದ್ಧಳಿರಲಿಲ್ಲ.

ಆಮೀನಾಬೀ ಮತ್ತೊಮ್ಮೆ ಬೇಡಿಕೊಂಡಳು: "ಬೇಡ ಸಾಲಿಹಾ, ಬೇಡ. ನೀವು ಹಟ ಮಾಡಬೇಡಿ; ಇದು ಹಟದ ವಿಷಯವಲ್ಲ. ನಮ್ಮ ಮಕ್ಕಳ ಬದುಕಿನ ವಿಷಯ. ನೀವು ಯಾರನ್ನೂ ಕೇಳುವುದಿಲ್ಲ ಎಂದು ಧಿಮಾಕು ಮಾಡಬೇಡಿ. ನಿಮ್ಮ ಮಗಳನ್ನಾದರೂ ಕೇಳಿ ನೋಡಿ" ಎಂದು ಅವಳು ಸಾಲಿಹಾಳ ಭುಜದ ಹಿಂದೆ ನೋಟ ಹರಿಸಿದಾಗ ಸಾಲಿಹಾ ಗಕ್ಕನೆ ತಿರುಗಿದಳು. ಅಲ್ಲಿ ಮೆಹೆಕ್ ಬಿಳುಚಿದ ಮೋರೆಯಿಂದ ಗೋಡೆಯನ್ನು ಹಿಡಿದು ನಿಂತಿದ್ದಳು. 'ಓಹೋ ಇಷ್ಟು ಮುಂದುವರೆದಿದೆಯೇ? ಅಂತಲೇ ಈ ಹೆಂಗಸು ಬರುವುದು ಕೂಡ ಇವಳಿಗೆ ಗೊತ್ತಿತ್ತು. ಅದೇ ಕಾರಣದಿಂದ ಮನೆಯಲ್ಲಿ ಉಳಿದಿದಾಳೆ.' ನಿಂತ ನೆಲವೇ ಜರುಗುತ್ತಿದೆ ಎಂದೆನಿಸಿ ಅವಳು ಅವಡುಗಚ್ಚಿದಳು.

ಕ್ಷಣ ಕಾಲ ಕಾದ ಆಮೀನಾಬೀ ಜೋರಾಗಿ ಮೆಹೆಕ್‌ಗೆ ಕೇಳುವಂತೆ, "ನನ್ನ ಕರ್ತವ್ಯವನ್ನು ನಾನು ನಿಭಾಯಿಸಿದ್ದೇನೆ ಮಗಳೇ. ಇನ್ನು ನೀನು ನನ್ನನ್ನಾಗಲಿ ಅಥವಾ ನನ್ನ ಮಗನನ್ನಾಗಲಿ ದೋಷಿಯನ್ನಾಗಿ ಮಾಡಬೇಡ" ಎಂದು ಹೇಳಿದವಳೇ ತನ್ನ ಮುಖದ ಮೇಲೆ ನಿಕಾಬ್ ಅನ್ನು ಎಳೆದುಕೊಂಡು ಬಾಗಿಲನ್ನು ಮುಚ್ಚಿಕೊಂಡು ಸದ್ದಿಲ್ಲದೇ ಸರಿದು ಹೋದಳು. ಅವಳಿನ್ನೂ ಕದಮುಚ್ಚಿಕೊಂಡು ಹೋಗಿರಲಿಲ್ಲ. ಅಷ್ಟರಲ್ಲಿ ಧಡಾರನೆ ಬಂದ ಸದ್ದಿಗೆ ಸಾಲಿಹಾ ತಿರುಗಿ ನೋಡಿದಾಗ ಮೆಹೆಕ್ ಪ್ರಜ್ಞೆ ತಪ್ಪಿ ಹತ್ತಿರದಲ್ಲಿದ್ದ ಕುರ್ಚಿಯ ಮೇಲೆ ಬಿದ್ದಿದ್ದಳು. ಸಾಲಿಹಾಳ ಬಾಯಿಯಿಂದ ಆರ್ತನಾದವೊಂದು ಹೊರಡಿತು. ನಂತರ ನಡೆದಿದ್ದೆಲ್ಲ ಅವಳ ಎದೆ ಸ್ಮಶಾನವಾದ ಕತೆಯೇ.

ಆಮೀನಬೀ ಬಂದು ಹೋದ ವಿಷಯವನ್ನು ಸಾಲಿಹಾ ತನ್ನ ಪತಿಗಾಗಲೀ ಅಥವಾ ನಜ್ಮಾಗಾಗಲೀ ಹೇಳಲಿಲ್ಲ. ಹೇಳುವಂತಹ ವಿಷಯವೇ ಅದು? ಆದರೆ ಪ್ರಜ್ಞೆ ತಪ್ಪಿದ ಮೆಹೆಕ್ ಪ್ರಜ್ಞೆ ಬಂದ